ಅಧ್ಯಕ್ಷರು: ಆ ವಿಚಾರದಲ್ಲಿ ಏನು ಉತ್ತರವನ್ನು ಕೊಡಬೇಕೋ ಅದನ್ನು ನಾನು ಕೊಟ್ಟಿದ್ದೇನೆ. ಅವರು ಕೊಟ್ಟಿರತಕ್ಕದ್ದು ಸರಿಯೋ, ತಪ್ಪೋ ಎಂಬ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ. ಸದನದ ಅಧ್ಯಕ್ಷರ ಸ್ಥಾನದ ಗೌರವವನ್ನು ಕಾಪಾಡತಕ್ಕ ದೃಷ್ಟಿಯಿಂದ ಏನು ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸದನದಲ್ಲಿ ಪ್ರಸ್ತಾಪವಾಗಿದೆ. ಆದ್ದರಿಂದ ತಾವು ತೀರ್ಪನ್ನು ಕೊಡಲೇ ಬೇಕು. ಇತಿಹಾಸದಲ್ಲಿ ತಮ್ಮ ತೀರ್ಪು ಇರಬೇಕು.

ಅಧ್ಯಕ್ಷರು: ಕಾನೂನು ತಜ್ಞರೊಡನೆ ಚರ್ಚೆ ಮಾಡುತ್ತಿದ್ದೇನೆ. ಚರ್ಚೆ ಇನ್ನೂ ಪೂರ್ಣವಾಗಿಲ್ಲ.

Sri Mallikarjuna kaharge: This is not correct. ಅವರು ಹೇಳಿ ಎಂಟು ತಿಂಗಳಾಗಿದೆ. ಇನ್ನೂ ಅದರ ಬಗ್ಗೆ ನೋಡುತ್ತೇನೆಂದರೆ ಹೇಗೆ?

ಶ್ರೀ ಹೆಚ್.ಎನ್. ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಸಮನ್ಸ್ ಇಶ್ಯೂ ಮಾಡತಕ್ಕದ್ದು ಬೇರೆ, ವಾರೆಂಟ್ ಇಶ್ಯೂ ಮಾಡತಕ್ಕದ್ದೇ ಬೇರೆ. ಈಗ ಅರೆಸ್ಟ್ ಬಗ್ಗೆ ಇಶ್ಯೂ ಮಾಡಿದ್ದಾರೆ.

Mr Speaker: When accoused is chargesheeted and the Chargesheet is submitted to the Court, when the acoused does not turn up in the court as against the dates they are supposed to appear when the matter is listed for business in the Court, the Court will have no other alternative but to serve the warrant to secure the presence of the a ccused in the court.

ಶ್ರೀ ಹೆಚ್.ಎನ್. ನಂಜೇಗೌಡ: ಅಧ್ಯಕ್ಷರೆ, ಅದು ನನಗೂ ಗೊತ್ತಿದೆ. ಎಂಟು ತಿಂಗಳ ಹಿಂದೆ ಚರ್ಚೆಯಾಗಿದೆ. ಅಂದು ಸಿಂಧ್ಯರವೇ, ಒಂದರ ಪ್ರಕಾರ ಮತ್ತೊಂದನ್ನು ನೋಟ್ ಮಾಡಿಕೊಂಡಿದ್ದರು.

Mr Speaker: Lot of changes have taken place. Mr. Scindia has moved on from Ministry to Transport Ministry, there is a change in the Leadership. there might have been communication gap. The Hon'ble Chief Minister is magnanimous enough to say that be would come back to me. He requires two days. May discussion over matter? ಈ ವಿಚಾರದಲ್ಲಿ ಇನ್ನು ಚರ್ಚೆ ಬೇಡ. ಮುಂದಿನ ವಿಚಾರಕ್ಕೆ ಹೋಗೋಣ. ಮಾನ್ಯ ಟಿ.ಬಿ. ಜಯಚಂದ್ರರವರೆ, ತಮ್ಮ ವಿಚಾರವನ್ನು ಪ್ರಸ್ತಾಪ ಮಾಡಿ.

ಅ) ರಾಜ್ಯದಲ್ಲಿರುವ ಪ್ರೌಢ ಶಾಲಾ ಅರೆಕಾಲಿಕೆ ಶಿಕ್ಷಕರನ್ನು ಖಾಯಂಗೊಳಿಸುವುದು.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಪ್ರೌಢ ಶಾಲಾ ಅರೆಕಾಲಿಕ ಶಿಕ್ಷಕರು ಸುಮಾರು 1984ರಿಂದಲೂ ಕೆಲಸಮಾಡಿಕೊಂಡು ಬರುತ್ತಿದ್ದಾರೆ ಪ್ರಾರಂಭದಲ್ಲಿ ನೂರು ರೂಪಾಯಿಗಳಿಗೆ ಅನಂತರ ಮುನ್ನೂರು ರೂಪಾಯಿಗಳಿಗೆ ಅನಂತರ ಹೈಕೋರ್ಟ್‌ನ ನಿರ್ದೇಶನದಂತೆ ಸಂಪೂರ್ಣವಾಗಿ ಅನುದಾನಿತವಾಗಿ ನೇಮಕಾತಿಯಾಗಿದೆ.

The judgement reads: "The petition is allowed with a specific direction to the Respondents (Education Department) to ensure that the petitions be reinstated before the conmencement of the next academic year. In the event of this not being done, the Respondent (Education Department) will be held personally eiable for contempt of court."

ಈಗ ಏನಾಗಿದೆ ಅಂದರೆ, 753 ಜನ ಅರೆ ಕಾಲಿಕೆ ಶಿಕ್ಷಕರು ಕಳೆದ 12 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಈಗ ಹೊಸದಾಗಿ ಶಿಕ್ಷಕರ ನೇರ ನೇಮಕಾತಿ ಆಗಿರುವ ಹಿನ್ನೆಲೆಯಲ್ಲಿ ಈ ಅರೆ ಕಾಲಿಕ ಶಿಕ್ಷಕರನ್ನೆಲ್ಲಾ ಮನೆಗೆ ಹೋಗುವಂತಹ ಪರಿಸ್ಥಿತಿ ಉಂಟಾಗಿದೆ. ಡಿ.ಡಿ.ಪಿ.ಐ. ಅವರ ಔರಲ್ ಇನ್‌ಸ್ಟ್ರಕ್ಷನ್ ಮೇರೆಗೆ ಅರೆ ಕಾಲಿಕ ಶಿಕ್ಷಕರನ್ನು ಕರ್ತವ್ಯದಿಂದ ರೀಲಿಪ್ ಮಾಡಲಾಗುತ್ತಿದೆ. ಹೀಗಾಗದರೆ ಅವರ ಪರಿಸ್ಥಿತಿ ಏನಾಗಬೇಕು? ಸರ್ಕಾರದವರು ಒಂದು ತೀರ್ಮಾನವನ್ನು ತೆಗೆದುಕೊಂಡು ಈ ಅರೆ ಕಾಲಿಕೆ ಶಿಕ್ಷಕರುಗಳನ್ನು ಖಾಯಂಗೊಳಿಸಬೇಕು. ಇವರನ್ನು ಯಾವ ರೀತಿ ಖಾಯಂಗೊಳಿಸಬೇಕು ಎಂದರೆ, ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಅರೆ ಕಾಲಿಕ ಉಪನ್ಯಾಯಸಕರಾಗಿ ಕಾರ್ಯನಿರ್ವಹಿಸುತ್ತಿದ್ದ 1700 ಜನರನ್ನು ಯಾವ ಆಧಾರದ ಮೇಲೆ ಖಾಯಂ ಮಾಡತಕ್ಕ ವ್ಯವಸ್ಥೆ ಮಾಡಿದ್ದೀರೋ ಅದೇ ಮಾದರಿಯಲ್ಲಿ ಅರೆ ಕಾಲಿಕ ಶಿಕ್ಷಕರನ್ನೂ ಕೂಡ ಸರ್ಕಾರ ಖಾಯಂಗೊಳಿಸಬೇಕು. ಅವರಿಗೆ ಒಂದು ನೀತಿ ಇವರಿಗೆ ಒಂದು ನೀತಿ ಮಾಡಲು ಬರುವುದಿಲ್ಲ. ಈ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದ ಹೇಳಿಕೆಯನ್ನು ನೀಡಬೇಕೆಂದು ಕೋರುತ್ತೇನೆ.

ಶ್ರೀ ಡಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ನನಗೂ ಈ ವಿಷಯದ ಬಗ್ಗೆ ಒಂದೆರಡು ಮಾತುಗಳನ್ನಾಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

Mr.SPEAKER: please make a brief submission restricting to only new points.

ಶ್ರೀ ಡಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೇ, ಈ ಹಿಂದೆ ಈ ವಿಷಯವನ್ನು ನಾವು ಸದನದಲ್ಲಿ ಪ್ರಸ್ತಾವ ಮಾಡಿದಾಗ ಸರ್ಕಾರ ನಮಗೆ ಒಂದು ಆಶ್ವಾಸನೆ ಕೊಟ್ಟಿತ್ತು. ಈ ಪಾರ್ಟ್ ಟೈಮ್ ಉಪಾಧ್ಯಾಯರನ್ನು ನಾವು ಖಾಯಂ ಮಾಡುತ್ತೇವೆ ಎಂದು ಸರ್ಕಾರ ಹಿಂದೆ ಭರವಸೆ ಕೊಟ್ಟಿತ್ತು. ಇದರ ಬಗ್ಗೆ ಹೈಕೋರ್ಟ್ ಕೂಡ ಡೈರೆಕ್ಷನ್ ಕೊಟ್ಟಿದೆ. ಸರ್ಕಾರ ಹೊಸದಾಗಿ ಉಪಾಧ್ಯಾಯರ ಹುದ್ದೆಗೆ ಅರ್ಜಿಗಳನ್ನು ಕರೆಯಿತು. ಆಗ ಸರ್ಕಾರದ

ಎಲ್ಲಾ ಅರೆ ಕಾಲಿಕ ಶಿಕ್ಷಕರನ್ನು ನೇಮಕಾತಿ ಸಮಯದಲ್ಲಿ ಅಕಾಮಡೇಟ್ ಮಾಡುವುದಾಗಿ ಭರವಸೆ ಕೊಟ್ಟಿತ್ತು. ಆದರೆ ಈಗ ಏನಾಗಿದೆ? 750 ಜನ ಪಾರ್ಟ್ ಟೈಮ್ ಟೀಚರ್ಸ್‌ಗಳನ್ನು ಸರ್ಕಾರ ಎಲಿಮಿನೇಟ್ ಮಾಡುತ್ತಿದೆ. ಇವರಲ್ಲಿ ಕಳೆದ 15 ವರ್ಷಗಳಿಂದ ಕೆಲಸ ಮಾಡುತ್ತಿರುವವರೂ ಸಹಾ ಇದ್ದಾರೆ. ಅವರುಗಳಿಗೆ ಏಜ್‌ಬಾರ್ ಆಗಿರುವುದರಿಂದ ನೇರ ನೇಮಕಾತಿ ಮಾಡುವ ಸಂದರ್ಭದಲ್ಲಿ ಅವರು ಅರ್ಜಿಗಳನ್ನು ಹಾಕಲಿಕ್ಕಾಗಲಿಲ್ಲ. ಹೇಗೆ ಜೂನಿಯರ್ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅರೆ ಕಾಲಿಕ ಉಪನ್ಯಾಯಸಕರನ್ನು ಸರ್ಕಾರ ಖಾಯಂ ಮಾಡಿತೋ ಅದೇ ರೀತಿ ಅರೆ ಕಾಲಿಕ ಶಿಕ್ಷಕರನ್ನೂ ಕೂಡ ಖಾಯಂ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

MR. SPEAKER:- Let me hear the Hon'ble Law Minister.

ಶ್ರೀ ಎಂ.ಸಿ. ನಾಣಯ್ಯ: ಮಾನ್ಯ ಅಧ್ಯಕ್ಷರೇ, ಈ ಸರ್ಕಾರದ ಪರಿಶೀಲನೆಯಲ್ಲಿದೆ. ನಾವು ಪಾರ್ಟ್ ಟೈಮ್ ಲೆಕ್ಚರರ್ಸ್‌ಗಳನ್ನು ಖಾಯಂಗೊಳಿಸತಕ್ಕ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ ಎನ್ನುವುದು ನಿಜ. ಇದಕ್ಕೆ ಸಂಬಂಧಪಟ್ಟ ಹಾಗೆ ಹೈಕೋರ್ಟ್ ಕೂಡ ಒಂದು ಆಜ್ಞೆ ಕೊಟ್ಟಿರುವುದು ನಿಜ. ಬೆಳಿಗ್ಗೆ ಕೆಲವು ಅರೆ ಕಾಲಿಕ ಶಿಕ್ಷಕರು ನನ್ನನ್ನು ಬೇಟಿ ಮಾಡಿ ಹೊಸದಾಗಿ ನೇಮಕಾತಿಗೊಂಡ ಶಿಕ್ಷಕರುಗಳನ್ನು ನಮ್ಮ ಸ್ಥಾನಗಳಿಗೆ ಪೋಸ್ಟಿಂಗ್ ಮಾಡಿ ನಮ್ಮನ್ನು ರಿಲೀಪ್ ಮಾಡುತ್ತಿದ್ದಾರೆಂದು ಹೇಳಿದರು. ಹಾಗೆಯೇ ಅವರು ಮಾನ್ಯ ಶಿಕ್ಷಣ ಸಚಿವರನ್ನೂ ಕೂಡ ಬೇಟಿ ಮಾಡಿದ್ದರು. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ ಎಂಬ ಮಾತನ್ನು ಅವರಿಗೆ ಹೇಳಿದ್ದೇನೆ. ಶಿಕ್ಷಣ ಸಚಿವರ ಜೊತೆಯಲ್ಲಿ ಅದರ ಬಗ್ಗೆ ಚರ್ಚೆ ಮಾಡಿ ಇದಕ್ಕೊಂದು ಪರಿಹಾರ ಕಂಡು ಹಿಡಿಯುವ ಪ್ರಯತ್ನವನ್ನು ನಾನು ಮಾಡುತ್ತೇನೆ. ಹೊಸದಾಗಿ ನೇಮಕಾತಿ ಮಾಡುವ ಸಂದರ್ಭಗಳಲ್ಲಿ ಈ ಅರೆ ಕಾಲಿಕ ಶಿಕ್ಷಕರುಗಳೂ ಕೂಡ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ. ಇವರನ್ನು ನಾವು ಹಾಗೆಯೇ ಖಾಯಂ ಮಾಡಲಿಕ್ಕೆ ಈಗಿನ ನಿಯಮಗಳ ಪ್ರಕಾರ ಸಾಧ್ಯವಾಗುವುದಿಲ್ಲ. ನಾವು ರೋಸ್ಟರ್ ಸಿಸ್ಟಮ್ ಅನ್ನೂ ಕೂಡ ಪಲೋ ಮಾಡಬೇಕಾಗುತ್ತದೆ. ಇವರನ್ನು ನಾವು ಖಾಯಂಗೊಳಿಸಬೇಕಾದರೆ ಹೊಸದಾಗಿ ನಿಯಮಗಳನ್ನು ರಚನೆ ಮಾಡಬೇಕಾದಂತಹ ಪರಿಸ್ಥಿತಿ ಬರುತ್ತದೆ. ಮಾನ್ಯ ಶಿಕ್ಷಣ ಸಚಿವರ ಜೊತೆ ಇದರ ಬಗ್ಗೆ ಚರ್ಚೆ ಮಾಡಿ ಒಂದು ಕ್ರಮ ತೆಗೆದುಕೊಳ್ಳುವ ಭರವಸೆಯನ್ನು ನಾನು ಕೊಡಬಯಸುತ್ತೇನೆ. ಅರೆ ಕಾಲಿಕ ಉಪನ್ಯಾಯಸಕರನ್ನು ಖಾಯಂಗೊಳಿಸಿರುವ ಆದೇಶಕ್ಕೆ ಕೆ.ಎ.ಜ. ತಡೆಯಾಜ್ಞೆ ನೀಡಿದೆ. ನಿಯಮಗಳಿಗೆ ಅನುಗುಣವಾಗಿ ಈ ರಿಕ್ರೂಟ್‌ಮೆಂಟ್ ಮಾಡಿಲ್ಲವೆಂದು ಕೆ.ಎ.ಟಿ ಹೇಳಿದೆ. ಅದನ್ನೂ ಕೂಡ ನಾವು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಜಿ.ಬಿ. ಜಯಚಂದ್ರ: ಸರ್ಕಾರದ ಮೊದಲು ಅರೆಕಾಲಿಕ ಶಿಕ್ಷಕರನ್ನು ಖಾಯಂಗೊಳಿಸುವ ನಿರ್ಧಾರ ತೆಗೆದುಕೊಳ್ಳಿ. ಅನಂತರ ಈ ವಿಷಯ ಕೋರ್ಟಿಗೆ ಹೋದರೆ ನೋಡೋಣ.

ಶ್ರೀ ಎಂ.ಸಿ. ನಾಣಯ್ಯ: ನಾನು ಈಗಾಗಲೇ ಹೇಳಿದ್ದೇನೆ, ಈ ಬಗ್ಗೆ ನಾನು ಶಿಕ್ಷಣ ಸಚಿವರ ಜೊತೆಗೆ ಚರ್ಚಿಸಿ ಈ ಸಮಸ್ಯೆ ಪರಿಹರಿಸುವ ಭರವಸೆ ಮಾಡುತ್ತೇನೆ.

ಅಧ್ಯಕ್ಷರು: ನಾನು ಸರ್ಕಾರಕ್ಕೆ ಇಷ್ಟೇ ಹೇಳುತ್ತೇನೆ. ಕಾಲೇಜು ಶಿಕ್ಷಕರ ವಿಚಾರ ವಿಚಾರದಲ್ಲಿ ತಾವು ಏನು ನಿರ್ಣಯ ತೆಗೆದುಕೊಂಡಿದ್ದಿರಿ, ಅದಕ್ಕೆ ಕೆ.ಎ.ಬಿ. ಸ್ಪೇ ನೀಡಿದೆ ಆ ಒಂದು ಅನುಭವದ ಹಿನ್ನೆಲೆಯಲ್ಲಿ ಅದೇ ತಪ್ಪನ್ನು ಪುನರಾವರ್ತನೆ ಮಾಡದಂತೆ ಕಾನೂನು ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಆದಷ್ಟು ಬೇಗ ಆರೆ ಕಾಲಿಕ ಶಿಕ್ಷಕರಿಗೆ ತೊಂದರೆ ಆಗದಂತೆ ಒಂದು ಪರಿಹಾರ ಕಂಡುಹಿಡಿಯಿರಿ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಅವರನ್ನು ರಿಲೀವ್ ಮಾಡದಂತೆ ತಾವು ಮಾನ್ಯ ಸಚಿವರಿಗೆ ಹೇಳಿ.

ಶ್ರೀ ಎಂ.ಸಿ. ನಾಣಯ್ಯ: ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಒಮ್ಮೆ ನಾವು ಭರವಸೆ ಕೊಟ್ಟ ಮೇಲೆ ಅದನ್ನು ಈಡೇರಿಸಬೇಕಾಗುತ್ತದೆ. ಈ ಒಂದು ವಿಚಾರವನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಪಾರ್ಟ್ ಟೈಮ್ ಲೆಕ್ಚರರ್ಸ್ ವಿಷಯದಲ್ಲಿ ನಾವು ಒಂದು ಟೈಮ್ ಆಪರೇಷನ್ ರೂಲ್ಸ್ ಮಾಡಿದ್ದೆವು. ಆರೆ ಕಾಲಿಕ ಶಿಕ್ಷಕರು ಕೆಲವರು ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಇವರನ್ನು ಖಾಯಂಗೊಳಿಸಲು ಕಾನೂನು ತೊಡಕು ಇರುವುದರಿಂದ ನಾವು ಈ ಬಗ್ಗೆ ಸ್ವಲ್ಪಮಟ್ಟಿಗೆ ವಿಚಾರ ಮಾಡಬೇಕಾಗುತ್ತವೆ. ರೋಸ್ಟರ್‌ಗೆ ಅನುಗುಣವಾಗಿ ಮತ್ತು ನೇಮಕಾತಿ ನಿಯಮಗಳಿಗೆ ಅನುಸಾರವಾಗಿ ನಾವು ಇವರನ್ನು ಖಾಯಂಗೊಳಿಸಲು ಪರಿಶೀಲಿಸಬೇಕಾಗುತ್ತದೆ. ಅದಕ್ಕೆ ಸ್ವಲ್ಪ ಕಾನೂನು ತೊಡಕು ಇದೆ. ಆದುದರಿಂದ ನಾನು ಮಾನ್ಯ ಸದಸ್ಯರಿಗೆ ಇಷ್ಟು ಮಾತ್ರ ಹೇಳಬಯಸುತ್ತೇನೆ. ನಾವು ಈ ಬಗ್ಗೆ ಪರಿಶೀಲನೆ ಮಾಡಿ ಯಾವ ರೀತಿ ನಾವು ಕಾನೂನಿನ ತೊಡಕಿನಿಂದ ತಪ್ಪಿಸಿಕೊಳ್ಳಬಹುದು ಎನ್ನುವುದನ್ನು ನೋಡುತ್ತೇವೆ. ಇವತ್ತಿನ ನಿಯಮಗಳ ಅಡಿಯಲ್ಲಿ ಅವರನ್ನು ಖಾಯಂಗೊಳಿಸಲು ಆಗದೇ ಇರುವಂತಹ ಸಂದರ್ಭದಲ್ಲಿ ಇವರಿಗೂ ಕೂಡ ಒಂದು ಟೈಮ್ ಆಪರೇಷನ್ ಆಗುವಂತಹ ನಿಯಮಗಳನ್ನು ರಚನೆ ಮಾಡಬೇಕೇ ಎಂಬುದನ್ನೂ ಕೂಡ ನಾವು ನೋಡಬೇಕಾಗುತ್ತದೆ. ನಾನು ಈಗಾಗಲೇ ಹೇಳಿರುವಂತೆ ಈ ಬಗ್ಗೆ ನಾನು ಶಿಕ್ಷಣ ಸಚಿವರ ಜೊತೆ ಚರ್ಚೆ ಮಾಡಿ ಸಮಸ್ಯೆ ಪರಿಹರಿಸಲು ಪ್ರಯತ್ನ ಪಡುತ್ತೇನೆ. ಇದು ಪರಿಶೀಲನೆಗೆ ಯೋಗ್ಯವಾಗಿರತಕ್ಕ ವಿಚಾರವಾಗಿದೆ.

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಸುಮಾರು 700 ಜನ ಆರೆ ಕಾಲಿಕ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಇವರನ್ನು ಖಾಯಂಗೊಳಿಸಲು ನಾವು ರೋಸ್ಟರ್ ಸಿಸ್ಟಮ್ ಫಾಲೋ ಮಾಡಬೇಡವೇ? ಮಾನ್ಯ ಖರ್ಗೆಯವರು ಇಲ್ಲಿ ಕುಳಿತಿದ್ದಾರೆ ರೋಸ್ಟರ್ ಸಿಸ್ಟಮ್ ಫಾಲೋ ಮಾಡದಿರುವುದನ್ನು ಅವರು ಒಪ್ಪುತ್ತಾರೆಯೇ? Can we bid good bye to rester system and fill up these 700 vacances as against the 1000 vacancies that are available? should we not go by roster system? Are we not expected to take care of those reserved sections? ಅದಕ್ಕಾಗಿಯೇ ಮಾನ್ಯ ಮಂತ್ರಿಗಳು ನಾನು ಇದನ್ನು ಪರಿಶೀಲನೆ ಮಾಡಿ ಹೇಳುತ್ತೇನೆಂದು ಹೇಳಿದ್ದಾರೆ. ಆರೆ ಕಾಲಿಕ ಶಿಕ್ಷಕರನ್ನು ರಿಲೀವ್ ಮಾಡಲಾರದೆಂಬ ಒಂದು ಒತ್ತಡವನ್ನು ಮಾನ್ಯ ಸದಸ್ಯರೆಲ್ಲರೂ

ಇಲ್ಲಿ ತರುತ್ತಿದ್ದೀರಿ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಇಷ್ಟೇ ಹೇಳುತ್ತೇನೆ. You any kindly think about that particular spect and come back to us within two days. ತಮಗೆ ನಾನು ಈ ವಿಷಯದಲ್ಲಿ ಸದನಕ್ಕೆ ಉತ್ತರ ಹೇಳಲು ಎರಡು ದಿವರಗಳ ಕಾಲಾವಕಾಶ ಕೊಟ್ಟಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ: ತಾವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ನಾನು ಉತ್ತರ ಎರಡು ದಿವಸದಲ್ಲಿ ಹೇಳುತ್ತೇನೆ.

(ಇ) ಅರಕಲಗೂಡು ತಾಲ್ಲೂಕಿನಲ್ಲಿ ಲೋಕೋಪಯೋಗಿ ವಿಭಾಗವನ್ನು ಸಣ್ಣ ನೀರಾವರಿ ಉಪವಿಭಾಗವನ್ನಾಗಿ ಪರಿವರ್ತಿಸಿರುವುದು

ಶ್ರೀ ಎ.ಜಿ. ರಾಮಸ್ವಾಮಿ (ಅರಕಲಗೂಡು): ಮಾನ್ಯ ಅಧ್ಯಕ್ಷರೇ, ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಒಂದು ಲೋಕೋಪಯೋಗಿ ಉಪ ವಿಭಾಗ ಇರಬೇಕೆಂದು ಹೇಳಿ ಈಗ ಹಿಂದೆ ಇದ್ದಂತಹ 59 ಸಣ್ಣ ನೀರಾವರಿ ಉಪ ವಿಭಾಗಗಳನ್ನು ಲೋಕೋಪಯೋಗಿ ಉಪವಿಭಾಗಗಳೆಂದು ಪರಿವರ್ತನೆ ಮಾಡಿ ಸರ್ಕಾರ ಹಿಂದೆ 1994ರಲ್ಲಿ ಒಂದು ಆದೇಶ ಹೊರಡಿಸಿತು. ಇದಾದ ಮೇಲೆ 59 ಲೋಕೋಪಯೋಗಿ ಉಪ ವಿಭಾಗಗಳನ್ನು ಮತ್ತೆ ಸಣ್ಣ ನೀರಾವರಿ ಉಪ ವಿಭಾಗಗಳನ್ನಾಗಿ ಮಾಡಿತು. ಮತ್ತೊಮ್ಮೆ ಸರ್ಕಾರ ಮೂರನೇ ಬಾರಿ ದಿನಾಂಕ 7.2.97ರಲ್ಲಿ ಆದೇಶ ಹೊರಡಿಸಿ ತನ್ನ ಹಿಂದಿನ ಆದೇಶಕ್ಕೆ ತಡೆಯಾಜ್ಞೆ ನೀಡಿ 59 ಉಪ ವಿಭಾಗಗಳ ಪೈಕಿ 57ನ್ನು ಲೋಕೋಪಯೋಗಿ ಉಪ ವಿಭಾಗಗಳನ್ನಾಗಿ ಮುಂದುವರೆಸಿತು. ಇಡೀ ರಾಜ್ಯದಲ್ಲಿ 8ನ್ನು ಮಾತ್ರ ಸಣ್ಣ ನೀರಾವರಿ ಉಪ ವಿಭಾಗಗಳನ್ನಾಗಿ ಪರಿವರ್ತನೆ ಮಾಡಲಾಯಿತು. ಅದರಲ್ಲಿ ನಮ್ಮ ಅರಕಲಗೂಡು ತಾಲ್ಲೂಕು ಕೂಡ ಒಂದು. ಸರ್ಕಾರ ಏಕೆ ಈ ರೀತಿ ಮಾಡಿದೆ?...

ಶ್ರೀ ಬಿ. ಶಿವರಾಂ: ಮಾನ್ಯ ಅಧ್ಯಕ್ಷರೇ, ಇದೇ ವಿಚಾರದಲ್ಲಿ ನನ್ನದೊಂದು ಮನವಿ ಇದೆ.

ಅಧ್ಯಕ್ಷರು: ಏನು ನಿಮ್ಮದು ಅದೇ ತರಹದ ಕೇಸೇ?

ಶ್ರೀ ಬಿ. ಶಿವರಾಂ: ಮಾನ್ಯ ಅಧ್ಯಕ್ಷರೇ, ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲೂ ಸಹಿತ ಸರ್ಕಾರದವರು ಹೀಗೇ ಮಾಡಿದ್ದಾರೆ. ನನ್ನ ಕ್ಷೇತ್ರ ಈ ತಾಲ್ಲೂಕಿನ ವ್ಯಾಪ್ತಿಗೆ ಬರುತ್ತದೆ. ಸಸರ್ಕಾರದವರು ಇದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೋ ಎಂಬುದು ನನಗಂತೂ ಗೊತ್ತಾಗುತ್ತಿಲ್ಲ. ನಮ್ಮಲ್ಲಿರುವ ಉಪ ವಿಭಾಗದಲ್ಲಿ ಹೈಯೆಸ್ಟ್ ವರ್ಕ್ ಲೋಡ್ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರಿಗೊಂದು ಸ್ವಲ್ಪ ರಿಲೀಫ್ ಸಿಗಲಿ ಎಂಬ ಹುದ್ದೇಶದಿಂದ ಮಧ್ಯ ಪ್ರವೇಶಿಸಿ ಮಾತನಾಡುತ್ತಿದ್ದೇನೆ. ಹಾಸನದಲ್ಲಿ ಎಲ್ಲಾ ವಿರೋಧ ಪಕ್ಷದವರು ವಿರುದ್ಧವಾಗೇ ನಡೆಯುತ್ತಿದೆ. ಮಾನ್ಯ ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕು.